186

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ರೇವಣಸಿದ್ದಪ್ಪ ಬಿನ್ ಪಂಪಾಪತೆಪ್ಪ ಕೋಲ್ಕಾರ, ಕೃಷಿ ಅಧಿಕಾರಿ, (ಟೆಕ್ನಿಕಲ್ ಅಸಿಸ್ಟಂಟ) ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಗಂಗಾವತಿ ಇವರ ವಿರುದ್ದ ದಾಖಲಾದ ಲೋಕಾಯುಕ್ತ ಟ್ರಾಪ್ ಪ್ರಕರಣದ ಅಭಿಯೋಜನಾ ಮಂಜೂರಾತಿ ಕುರಿತು.

**ಓದಲಾಗಿದೆ.:-**

(1) ಅಪರ ಪೋಲಿಸ ಮಹಾ ನಿರ್ದೇಶಕರ, ಕರ್ನಾಟಕ ಲೋಕಾಯುಕ್ತ ಇವರ ಪತ್ರ ಸಂ. ಲೋಕ್/ಐಎನ್‌ವಿ(ಜಿ)/ಜಿ-38/ಸಿಆರ್9/2010 ಕೊಪ್ಪಳ, ದಿನಾಂಕ: 18-03-2011.
(2) ತನಿಖಾಧಿಕಾರಿಯವರ ಅಂತಿಮ ತನಿಖಾ ವರದಿ ದಿನಾಂಕ: 16-12-2010
(3) ಅಂತಿಮ ತನಿಖಾ ದಾಖಲಾತಿಗಳಾದ ಫಿರ್ಯಾದು, ಪ್ರಥಮ ವರ್ತಮಾನ ವರದಿ, ಪ್ರಾಯೋಗಿಕ ಪಂಚನಾಮಾ, ಜಪ್ತಿ ಪಂಚನಾಮಾ, ಸ್ವತ್ತುಗಳ ಪಟ್ಟಿ, ರಾಸಾಯನಿಕ ಪರೀವಿಕ್ಷಕರ ವರದಿ, ಸಾಕ್ಷಿದಾರರ ಹೇಳಿಕೆ

**ಪ್ರಸ್ತಾವನೆ:-**

ಕ್ರ.ಸಂ.(1)ರಲ್ಲಿ ಓದಲಾದ ಪತ್ರದಲ್ಲಿ, ಅಪರ ಪೋಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ತಮ್ಮ ಪತ್ರದೊಂದಿಗೆ, ಶ್ರೀ ರೇವಣಸಿದ್ದಪ್ಪ ಕೃಷಿ ಅಧಿಕಾರಿ(ಟೆಕ್ನಿಕಲ್ ಅಸಿಸ್ಟಂಟ) ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಗಂಗಾವತಿ ಇವರ ವಿರುದ್ದ ಮೊಕದ್ದಮೆ ಸಂಖ್ಯೆ: 09/2010ರಲ್ಲಿ ಕರ್ನಾಟಕ ಲೋಕಾಯುಕ್ತ, ಕೊಪ್ಪಳ, ಪೋಲೀಸ್ ಠಾಣೆಯಲ್ಲಿ ದಾಖಲಿಸಿರುವ ಪ್ರಕರಣದ ತನಿಖಾಧಿಕಾರಿಯ ಅಂತಿಮ ವರದಿಯ ನಕಲು ಮತ್ತು ಉಲ್ಲೇಖ-3ರಲ್ಲಿಯ ತನಿಖಾ ದಾಖಲೆಗಳನ್ನು ಸರ್ಕಾರಕ್ಕೆ ಕಳುಹಿಸುತ್ತಾ, ಅಪಾದಿತ ಅಧಿಕಾರಿಯವರನ್ನು ಘನ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು, ಲಂಚ ನಿರೋಧಕ ಕಾಯ್ದೆ 1988ರ 19 (1)(ಸಿ)ನೆಯ ಕಲಂ ಅಡಿಯಲ್ಲಿ ಮಂಜೂರಾತಿ ನೀಡುವಂತೆ ಕೋರಿರುತ್ತಾರೆ

ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಅಪರ ಪೋಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರುರವರ ಮೇಲೆ ಕ್ರ.ಸಂ.(1)ರಲ್ಲಿ ಓದಲಾದ ಪತ್ರದೊಂದಿಗೆ ಕಳುಹಿಸಿಕೊಟ್ಟ ಈ ಕೆಳಕಂಡ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದೆ.

ಅ) ಶ್ರೀ ಶ್ರೀನಿವಾಸ ತಂದೆ ಸತ್ಯನಾರಾಯಣ ,ಮ್ಯಾನೇಜರ್, ಶ್ರೀ ರಾಘವೇಂದ್ರ, ಇಂಜಿನಿರಿಂಗ್ ವರ್ಕ್ಸ ಡ್ಯಾಡಿ ಕಾಲೋನಿ, ರಾಯಚೂರು ಇವರ ಲಿಖಿತ ಫಿರ್ಯಾದಿ ದಿನಾಂಕ:29-07-2010.
ಆ) ಪ್ರಥಮ ವರ್ತಮಾನ ವರದಿ ಕೊಪ್ಪಳ ಲೋಕಾಯುಕ್ತ ಪೋಲಿಸ ಠಾಣೆ, ಪ್ರಕರಣ ಸಂಖ್ಯೆ:09/2010
ಇ) ಪ್ರಾಯೋಗಿಕ ಪಂಚನಾಮಾ 29-07-2010.
ಈ) ಹಣ ಜಪ್ತ ಪಂಚನಾಮಾ (ಟ್ರ್ಯಾಪ ಮಹಜರ) ದಿನಾಂಕ: 29-07-2010
ಉ) ರಸಾಯನಿಕ ಪರೀಕ್ಷಕರ ವಿಶ್ಲೇಷಣಾ ವರದಿ
ಊ) ಕೃತ್ಯ ನಡೆದ ಸ್ಥಳದ ನಕಾಶೆ,

--2--

ಋ) <u>ಅಭಿಯೋಜನಾ ಪರ ಸಾಕ್ಷಿದಾರರ ಹೇಳಿಕೆಗಳು:-</u>

1) ಶ್ರೀ ಶ್ರೀನಿವಾಸ ತಂದೆ ಸತ್ಯನಾರಾಯಣ, ಮ್ಯಾನೇಜರ, ಶೀ ರಾಘವೇಂದ್ರ ಇಂಜಿನಿರಿಂಗ್ ವರ್ಕ್ಸ್, ಡ್ಯಾಡಿ ಕಾಲೋನಿ, ರಾಯಚೂರು- ಫಿರ್ಯಾದಿದಾರ.
2) ಶ್ರೀ ಅಡಿವೆಯ್ಯ, ತಂದೆ ಪರಯ್ಯ ಹಿರೇಮಠ್, ಪ್ರಥಮ ದರ್ಜೆ ಸಹಾಯಕ, ಜಿಲ್ಲಾ ಪಂಚಾಯತ್ ಕೊಪ್ಪಳ (ಪಂಚ-1)
3) ಶ್ರೀ ಸೆಲ್ವರಾಜು ತಂದೆ ಪಾಪಯ್ಯ, ಸಹ ಶಿಕ್ಷಕರು, ಸರ್ಕಾರಿ ಮಾದರಿಯ ಹಿರಿಯ ಪ್ರಾಥಮಿಕ ಶಾಲೆ, ಗಿಣಿಗೇರಾ, ತಾ: ಜಿ: ಕೊಪ್ಪಳ (ಪಂಚ-2)
4) ಶ್ರೀ ವಿರೇಶ ಹುನಗುಂದ ತಂದೆ ಯಲ್ಲಪ್ಪ ಹುನಗುಂದ, ಸಹಾಯಕ ಕೃಷಿ ನಿರ್ದೇಶಕರು ಗಂಗಾವತಿ.
5) ಶೀ ಹನುಮೇಶ ತಂದೆ ಬಾಬಣ್ಣ, ಕಂಬಾರ , ಮ್ಯಾನೇಜರ್, ಸರ್ವೇಶ್ ಹೋಟೇಲ್, ಗಂಗಾವತಿ. ಸಾ: ಅಂಬೇಡಕರ ನಗರ, ಗಂಗಾವತಿ
6) ಶ್ರೀ ತಿಪ್ಪೇಶ್ ತಂದೆ ಅಯ್ಯಪ್ಪ ಹಾದಿಮನಿ, ಸಪ್ಲಾಯರ್, ಸರ್ವೇಶ ಹೋಟೇಲ್, ಸಾ: ಜೈ ಬೀಮಾ ನಗರ ಗಂಗಾವತಿ.
7) ಶ್ರೀ ಚಂದ್ರಶೇಖರ ತಂದೆ ಶಾಮಣ್ಣ ಐಲಿ, ಸಪ್ಲಾಯರ್, ಸರ್ವೇಶ ಹೋಟೇಲ್, ಗಂಗಾವತಿ. ಸಾ: ನೀಲಕಂಠೇಶ್ವರ ಕ್ಯಾಂಪ್, ಗಂಗಾವತಿ.
8) ಶ್ರೀ ನಾಗರೆಡ್ಡೆಪ್ಪ ತಂದೆ ಅಯ್ಯಪ್ಪ ಸಾಕೀನ ಕೃಷ್ಣಾಪೂರ, ತಾ: ಗಂಗಾವತಿ.
9) ಶ್ರೀ ಎ.ಸೂರ್ಯನಾರಾಯಣ ತಂದೆ ರಾಮಕೃಷ್ಣ, ಸಾ: ಗುಂಡೂರು ತಾ: ಗಂಗಾವತಿ.
10) ಶ್ರೀ ಕೆ. ಆನಂದ ತಂದೆ ಆದಿನಾರಾಯಣ ಸಾ: ಗುಂಡೂರು. ಕ್ಯಾಂಪ್.ಗಂಗಾವತಿ.
11) ಶ್ರೀ ಎಸ್. ಗೋವಿಂದ ತಂದೆ ಸೂರಣ್ಣ, ಸಾ: ಗುಂಡೂರು ಕ್ಯಾಂಪ್, ತಾ: ಗಂಗಾವತಿ.
12) ಶ್ರೀ ಯಮನಪ್ಪ ತಂದೆ ಲಕ್ಷ್ಮಪ್ಪ ಸಾ: ಸಿಂಗನಾಳ. ತಾ: ಗಂಗಾವತಿ.
13) ಶ್ರೀ ಪಪ್ಪಾರಾಮ್ ತಂದೆ ಶಿವರಾಮಜಿ, ಸಾ: ಸಿದ್ದಾಪೂರ. ತಾ: ಗಂಗಾವತಿ.
14) ಶ್ರೀ ಲಿಂಗಪ್ಪ ತಂದೆ ಶಿವಲಿಂಗಪ್ಪ ಸಾ: ಗುಂಡೂರು ಕ್ಯಾಂಪ್, ತಾ: ಗಂಗಾವತಿ.
15) ಶ್ರೀ ಡಿ.ಕೃಷ್ಣರಾವ್ ತಂದೆ ಗಂಗಾಧರ ಸತ್ಯಂ, ಸಾ: ಗುಂಡೂರು ಕ್ಯಾಂಪ್, ತಾ: ಗಂಗಾವತಿ.
16) ಶ್ರೀಮತಿ ಕಾಟೂರಿ ಸೀತಾರತ್ನಂ ಗಂಡ ವೆಂಕಟರಾಮ, ಸಾ: ಅಂಜೂರು ಕ್ಯಾಂಪ್.ಗಂಗಾವತಿ.
17) ಶ್ರೀ ಯಲಮಾಟಿ, ವೆಂಕಟರಾಮ್ ತಂದೆ ಸುಬ್ಬಾರಾವ್ ಸಾ: ತಾಮ್ರಪಳ್ಳಿ, ತಾ: ಗಂಗಾವತಿ.
18) ಶ್ರೀ ಯಲಮಾಟಿ, ಸತ್ಯನಾರಾಯಣರಾವ್ ತಂದೆ ಸುಬ್ಬರಾವ್, ಸಾ: ತಾಮ್ರಪಳ್ಳಿ ಕ್ಯಾಂಪ್, ತಾ:ಗಂಗಾವತಿ
19) ಶ್ರೀ ಎಂ. ಲಕ್ಷ್ಮೀನಾರಾಯಣ ತಂದೆ ಸತ್ಯನಾರಾಯಣ, ಸಾ: ಹೊಸಕೇರಾ ಕ್ಯಾಂಪ್, ತಾ: ಗಂಗಾವತಿ.
20) ಶ್ರೀ ಮುಪ್ಪನ ಶ್ರೀನಿವಾಸ ತಂದೆ ವೆಂಕಟರಾವ್ ಸಾ: ಅಯೋದ್ಯಾ, ತಾ:ಗಂಗಾವತಿ.
21) ಶ್ರೀ ಸೂರ್ಯನಾರಾಯಣ ತಂದೆ ಆಂಜನೇಯಲು ಸಾ: ಕಂಟೋಜಿ, ತಾ: ಗಂಗಾವತಿ.
22) ಶ್ರೀ ಶ್ರೀನಿವಾಸರಾವ್ ತಂದೆ ವೆಂಕಟನಾರಾಯಣ, ಸಾ: ಬರಗೂರು ಕ್ಯಾಂಪ್. ತಾ: ಗಂಗಾವತಿ
23) ಶ್ರೀ ಶರಣಬಸಪ್ಪ ತಂದೆ ಮಹಾದೇವಪ್ಪ, ನಾಗಲಾಪೂರ ಕಿರಿಯ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬಂದರು ಮತ್ತು ಒಳನಾಡು ಉಪ ವಿಭಾಗ ಗಂಗಾವತಿ, ಸಾ: ಮುದಗಲ್.
24) ಶ್ರೀ ಟಿ.ಮಹಾಬಳೇಶಪ್ಪ ತಂದೆ ನಾಗಲಿಂಗಪ್ಪ ಎಫ್.ಡಿ.ಎ. ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಗಂಗಾವತಿ
25) ಶ್ರೀ ವೀರಣ್ಣ ತಂದೆ ಹನುಮಂತಪ್ಪ ಹೂಗಾರ್, ಸಹಾಯಕ ಕೃಷಿ ಅಧಿಕಾರಿ, ಗಂಗಾವತಿ ಸಾ: ಕೆರೆಹಳ್ಳಿ, ತಾ: ಕೊಪ್ಪಳ.
26) ಶ್ರೀ ವಿಠಲರಾವ್, ತಂದೆ ಮಾಧ್ವರಾವ್ ದೇಸಾಯಿ, ಸಿಹೆಚ್‌ಸಿ ಲೋಕಾಯುಕ್ತ ಠಾಣೆ ಕೊಪ್ಪಳ.

27) ಶ್ರೀ ವಾಸನಗೌಡ ತಂದೆ ಚನ್ನನಗೌಡ ಪಾಟೀಲ್, ಸಿಹೆಚ್‌ಸಿ ಲೋಕಾಯುಕ್ತ ಪೋಲಿಸ ಠಾಣೆ ಕೊಪ್ಪಳ.

28) ಶ್ರೀ ರಾಮಣ್ಣ, ತಂದೆ ಪರಸಪ್ಪ ಬನ್ನಿಗೋಳ, ಸಿಪಿಸಿ ಲೋಕಾಯುಕ್ತ ಪೋಲಿಸ್ ಠಾಣೆ, ಕೊಪ್ಪಳ.

29) ಶ್ರೀ ಬಸಪ್ಪ ತಂದೆ ಈರಪ್ಪ ಹಾದಿಮನಿ, ಸಿಪಿಸಿ ಲೋಕಾಯುಕ್ತ ಪೋಲಿಸ್ ಠಾಣೆ, ಕೊಪ್ಪಳ.

30) ಶ್ರೀ ಸಿದ್ದಯ್ಯ ತಂದೆ ಪಂಚಾಕ್ಷರಯ್ಯ, ಹಿರೇಮಠ, ಸಿಪಿಸಿ ಲೋಕಾಯುಕ್ತ ಪೋಲಿಸ್ ಠಾಣೆ, ಕೊಪ್ಪಳ.

31) ಶ್ರೀ ದಕ್ಷಿಣಮೂರ್ತಿ ತಂದೆ ವಿರುಪಾಕ್ಷಪ್ಪ ಕೊಪ್ಪಳ, ಸಿಪಿಸಿ ಲೋಕಾಯುಕ್ತ ಪೋಲಿಸ್ ಠಾಣೆ, ಕೊಪ್ಪಳ.

32) ಶ್ರೀ ನಿಂಗಪ್ಪ ತಂದೆ ಹನುಮಪ್ಪ ತಳವಾರ ಕೃಷಿ ಅಧಿಕಾರಿ ರೈತ ಸಂಪರ್ಕ ಕೇಂದ್ರ, ಸಿದ್ದಾಪುರ ತಾ: ಗಂಗಾವತಿ.

33) ಶ್ರೀ ಎಂ. ಶ್ರೀನಿವಾಸರಾವ್ ತಂದೆ ಸತ್ಯನಾರಾಯಣರಾವ, ಶ್ರೀ ರಾಘವೇಂದ್ರರಾವ್ ಮಾಲಿಕರು, ಶ್ರೀ ರಾಘವೇಂದ್ರ ಇಂಜಿನಿಯರಿಂಗ್ ವರ್ಕ್ಸ ಕೃಷಿ ವಿಶ್ವ ವಿದ್ಯಾನಿಲಯದ ಹತ್ತಿರ, ರಾಯಚೂರು.

ಖ) ಫಿರ್ಯಾದಿದಾರರು ತಮ್ಮ ಸಂಸ್ಥೆಯಿಂದ 2010 ಮತ್ತು 11ನೇ ಸಾಲಿನಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಅಡಿಯಲ್ಲಿ ರೈತರು ತಮ್ಮ ಪಾಲಿನ ಅರ್ಧ ಹಣ ಹಾಗೂ ರಾಜ್ಯ ಸರ್ಕಾರದಿಂದ ಕೊಡಲಾಗುವ ಸಹಾಯ ಧನದ ಹಣದಲ್ಲಿ ಟ್ರಾಕ್ಟರುಗಳಿಗೆ ಅಳವಡಿಸುವ ಕೃಷಿ ಯಂತೋಪಕರಣಗಳನ್ನು ತಯಾರು ಮಾಡಿ ಸರಬರಾಜು ಮಾಡಲು ರಾಜ್ಯ ಸರ್ಕಾರದಿಂದ ಸೂಕ್ತ ಅನುಮತಿಯನ್ನು ಪಡೆದುಕೊಂಡಿದ್ದು, ಅದರಂತೆ ಈವರೆಗೆ ಅನೇಕ ಜನ ರೈತರ ಟ್ರ್ಯಾಕ್ಟರುಗಳಿಗೆ ಅಳವಡಿಸುವ ಕೃಷಿ ಯಂತ್ರೋಪಕರಣಗಳನ್ನು ಸರಬರಾಜು ಮಾಡಿರುತ್ತಾರೆ. ಕೃಷಿ ಯಂತ್ರೋಪಕರಣಗಳನ್ನು ಪಡೆದುಕೊಂಡ ರೈತರು ತಮ್ಮ ಪಾಲಿನ ಅರ್ಧ ಹಣವನ್ನು ಫಿರ್ಯಾಧಿದಾರರ ಸಂಸ್ಥೆಯ ಹೆಸರಿಗೆ ಡಿ.ಡಿ. ಮೂಲಕ ಪಾವತಿಸಿರುತ್ತಾರೆ. ಇನ್ನುಳಿದ ಅರ್ಧ ಹಣ ಸಹಾಯ ಧನ ಸರ್ಕಾರದಿಂದ ಬರಬೇಕಾಗಿರುತ್ತದೆ.

ಈ ಹಣವನ್ನು ಪಡೆಯಲು ಫಿರ್ಯಾದಿದಾರರು ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಗಂಗಾವತಿರವರಿಗೆ ಕೃಷಿ ಯಂತ್ರೋಪಕರಣಗಳನ್ನು ಒದಗಿಸಿದ ಬಗ್ಗೆ ಅನೇಕ ದಾಖಲೆಗಳನ್ನು ಲಗತ್ತಿಸಿ ಅರ್ಜಿ ಸಲ್ಲಿಸಿದ್ದು, ಇದೆ

ಈ ಪ್ರಸ್ತಾವನೆಗಳನ್ನು ಪರಿಶೀಲಿಸಿದನಂತರ ಸರ್ಕಾರದಿಂದ ದೊರೆಯುವ ಯಂತ್ರೋಪಕರ ತಯಾರಿಕೆಗೆ ವೆಚ್ಚವಾದ ಸಹಾಯ ಧನವನ್ನು ಕೃಷಿ ಅಧಿಕಾರಿ(ಟೆಕ್ನಿಕಲ್ ಅಸಿಸ್ಟಂಟ)ರವರು ಶಿಫಾರಸ್ಸು ಮಾಡಿ ಮಂಡಿಸಿದನಂತರ ಸಹಾಯಕ ಕೃಷಿ ನಿರ್ದೇಶಕರು, ಗಂಗಾವತಿರವರು ಸಹಾಯ ಧನದ ಬಿಡುಗಡೆ ಮಾಡಬೇಕಾಗುತ್ತದೆ.

ಅದರಂತೆ ಈ ವರ್ಷ 16 ಜನ ರೈತರುಗಳ ಟ್ರ್ಯಾಕ್ಟರುಗಳಿಗೆ ಅಳವಡಿಸುವ ವಿವಿಧ ರೀತಿಯ ಕೃಷಿ ಯಂತ್ರೋಪಕರಣಗಳನ್ನು ಅಳವಡಿಸಿ, ಅವರಿಂದ ಅಗತ್ಯ ದಾಖಲೆಗಳನ್ನು ಹಾಗು ತಮ್ಮ ಸಂಸ್ಥೆಗೆ ಕೊಡಬೇಕಾಗಿರುವ ಹಣದ ಡಿ.ಡಿ.ಯನ್ನು ಪಡೆದುಕೊಂಡಿದ್ದು, ಸರ್ಕಾರದಿಂದ ಬರಬೇಕಾಗಿರುವ ಸಹಾಯ ಧನದ ಹಣಕ್ಕಾಗಿ ಪ್ರಸ್ತಾವನೆಗಳನ್ನು ಸಹ ಸಲ್ಲಿಸಿದ್ದು ಇರುತ್ತದೆ.

ಈ ಬಗ್ಗೆ ಫಿರ್ಯಾದಿದಾರರು, ಸಹಾಯಕ ಕೃಷಿ ನಿರ್ದೇಶಕರ ಕಛೇರಿಯ ಕೃಷಿ ಅಧಿಕಾರಿ (ಟೆಕ್ನಿಕಲ್ ಅಸಿಸ್ಟಂಟ್) ಶ್ರೀ ರೇವಣಸಿದ್ದಪ್ಪರವರನ್ನು ದಿನಾಂಕ: 25-07-2010ರಂದು ತಮ್ಮ ಮೊಬೈಲ್ ಸಂ. 9880305200ನೇದ್ದರ ಮೂಲಕ ಸಂಪರ್ಕಿಸಿ ಮತ್ತೆ ವಿಚಾರಿಸಿದಾಗ " ಮಿನಿಮಮ್ ಹದಿನೈದುನೂರಿಗಾದರೂ ಒಪ್ಪಿಕೊಳ್ಳಿರಿ ಹದಿನೈದು ನೂರಕ್ಕಿಂತ ಕಡಿಮೆ ತಗೋಳ್ಳಕಾಗಲ್ಲ ಅಂತ ಪ್ರತಿ ಪ್ರಪೋಜಲ್‌ಗೆ 1500-00ರೂ.ರಂತೆ ಹಣಕ್ಕಾಗಿ ಒತ್ತಾಯ ಮಾಡಿರುತ್ತಾರೆ.,. ಈ ಬಗ್ಗೆ ನಡೆದ ಸಂಭಾಷಣೆಯನ್ನು ಫಿರ್ಯಾಧಿದಾರರು ತಮ್ಮ ಮೊಬೈಲ್‌ನಲ್ಲಿ ರಿಕಾರ್ಡ ಮಾಡಿಕೊಂಡಿರುತ್ತಾರೆ.

ಫಿರ್ಯಾಧಿಧಾರರ ಸಂಸ್ಥೆಯಿಂದ ಒದಗಿಸಿದ ಟ್ರ್ಯಾಕ್ಟರಿನ ಕೃಷಿ ಯಂತೋಪಕರಣಗಳ ಸಹಾಯ ಧನದ ಮೊತ್ತ ಅಂದರೆ, 18,750/-ರೂ.ಗಳ 16 ಪ್ರಪೋಜಲ್‌ಗಳ ಮಂಜೂರಾತಿಗಾಗಿ ಕಡತ ಮಂಡಿಸಲು ಹಾಗೂ ರೈತರು ಈ ಬಗ್ಗೆ ಕೊಟ್ಟ ರೂ. 18,750 ರೂಪಾಯಿಯ 16 ಮೂಲ ಡಿ.ಡಿ.ಗಳನ್ನು ಹಿಂದಿರುಗಿಸಲು ಶ್ರೀ ರೇವಣಸಿದ್ದಪ್ಪ , ಕೃಷಿ ಅಧಿಕಾರಿ (ಟೆಕ್ನಿಕಲ್ ಅಸಿಸ್ಟಂಟ್) ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಗಂಗಾವತಿರವರು ತಮ್ಮ ಸ್ವಂತಕ್ಕ ಪ್ರತಿ ಪ್ರಪೋಜಲ್‌ಗೆ 1,500/-ರಂತೆ ಒಟ್ಟು ರೂ. 24,000=00ರೂಪಾಯಿ ಲಂಚದ ಹಣ ಕೇಳುತ್ತಿದ್ದಾರೆ ಅಂತಾ ಫಿರ್ಯಾಧಿದಾರರು ದಿನಾಂಕ: 29-07-2010ರಂದು ಪಿ.ಐ. ಲೋಕಾಯುಕ್ತ ಠಾಣೆ , ಕೊಪ್ಪಳರವರಲ್ಲಿ ಹಾಜರಾಗಿ ಶ್ರೀ ರೇವಣಸಿದ್ದಪ್ಪರವರ ವಿರುದ್ದ ಸೂಕ್ತ ಕ್ರಮ ಜರುಗಿಸಲು ವಿನಂತಿಸಿಕೊಂಡ ಮೇರೆಗೆ ಪಿ.ಐ.ರವರು, ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.

ಫಿರ್ಯಾಧಿದಾರರ ದೂರಿನಂತೆ ತನಿಖಾಧಿಕಾರಿಗಳು ಬಲೆ ಬೀಸುವ ಮೊದಲಿನ ಎಲ್ಲಾ ಔಚಿತ್ಯಪೂರ್ಣ ಕಾರ್ಯಕ್ರಮಗಳನ್ನು ನೆರವೇರಿಸಿದ ನಂತರ ದಿನಾಂಕ: 29-07-2010ರಂದು ಬಲೆ ಬೀಸಿದ ಟ್ರ್ಯಾಪ್ ಯಶಸ್ವಿಯಾಗಿ ಶ್ರೀ ರೇವಣಸಿದ್ದಪ್ಪ ತಂದೆ ಪಂಪಾಪತೆಪ್ಪ ಕೋಲ್ಕಾರ್, ಕೃಷಿ ಅಧಿಕಾರಿ (ಟೆಕ್ನಿಕಲ್ ಅಸಿಸ್ಟಂಟ್) ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಗಂಗಾವತಿ ಇವರು ಫಿರ್ಯಾದಿದಾರರಿಂದ ಸರ್ಕಾರಿ ಕೆಲಸ ಮಾಡಿಕೊಡಲು ಗಂಗಾವತಿಯ ಬಸ್ ಸ್ಟಾಂಡ್ ಹತ್ತಿರ ಇರುವ ಸರ್ವೇಶ್ ಹೋಟೇಲಿನ ಊಟದ ಹಾಲಿನಲ್ಲಿ ಅಕ್ರಮ ಸಂಭಾವನೆಯಾದ ರೂ. 24,000/-

ಪಡೆದುಕೊಂಡು ಸಿಕ್ಕಿಬಿದ್ದಿರುತ್ತಾರೆ. ಅಪಾದಿತ ಅಧಿಕಾರಿಯವರ ಎರಡೂ ಕೈ ಬೆರಳುಗಳನ್ನು ಸೋಡಿಯಂ ಕಾರ್ಬೋನೆಟ್ ದ್ರಾವಣದಲ್ಲಿ ಮಾರ್ಜನೆ ಮಾಡಿದಾಗ ಅದು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದು, ರಸಾಯನಿಕ ತಜ್ಞರ ಪರೀಕ್ಷಣಾ ವರದಿಯಿಂದಲೂ ಸಹ ದೃಢಪಟ್ಟಿರುತ್ತದೆ.

ಹಾಗೇ ನೆರಳು ಸಾಕ್ಷಿ ಪಂಚ-2 ಇವರು ಫಿರ್ಯಾದಿ ಮತ್ತು ಅಪಾದಿತ ಅಧಿಕಾರಿಯ ನಡುವಿನ ವ್ಯವಹಾರವನ್ನು ಗಮನಿಸಿದ್ದಲ್ಲದೇ ಸಂಭಾಷಣೆಯನ್ನು ಕೇಳಿರುತ್ತಾರೆ. ಹಾಗೂ ಅಕ್ರಮ ಸಂಭಾವನೆಯಾದ 24,000/-ರೂಪಾಯಿಗಳು ಅಪಾದಿತ ಅಧಿಕಾರಿಯವರು ತೊಟ್ಟುಕೊಂಡ ಪ್ಯಾಂಟಿನ ಎಡಗಡೆ ಜೇಬಿನಲ್ಲಿ ದೊರೆತಿದ್ದು, ಅವುಗಳನ್ನು ಪಂಚರ ಸಮಕ್ಷಮ ಹಣ ಜಪ್ತ ಪಂಚನಾಮಾ ಕಾಲಕ್ಕೆ ಜಪ್ತ ಮಾಡಿಕೊಳ್ಳಲಾಗಿದೆ.

ಈ ಮೇಲಿನ ಎಲ್ಲಾ ಕಾರಣಗಳಿಂದ ಅಪಾದಿತ ಅಧಿಕಾರಿಯವರಾದ ಶ್ರೀ ರೇವಣಸಿದ್ದಪ್ಪ ಬಿನ್ ಪಂಪಾಪತೆಪ್ಪ ಕೋಲ್ಕಾರ, ಇವರು ಲಂಚ ನಿರೋಧ ಕಾಯ್ದೆ, 1988ರ ಕಲಂ 7, 13(1) ಜೊತೆಗೆ 13(2)ರ ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಆದ್ದರಿಂದ ಸದರಿಯವರನ್ನು ಲಂಚ ನಿರೋಧ ಕಾಯ್ದೆ 1988ರ ಕಲಂ 7,13(1)(ಡಿ) ಜೊತೆಯಲ್ಲಿ ಓದಲಾದ ಕಲಂ 13(2)ರ ಅಡಿಯಲ್ಲಿ ಅಭಿಯೋಜನೆಗೆ ಒಳಪಡಿಸುವುದು ಅವಶ್ಯ ಎಂಬುದನ್ನು ಸರ್ಕಾರವು ಮನಗಂಡಿರುತ್ತದೆ.

ಸಕ್ಷಮ ಪ್ರಾಧಿಕಾರಿಯಾದ ಸರ್ಕಾರ ಅಪಾದಿತರನ್ನು ಕೆಲಸದಿಂದ ತೆಗೆದು ಹಾಕುವ ಅಧಿಕಾರವುಳ್ಳದಾಗಿದ್ದು, ಲಂಚ ನಿರೋಧಕ ಕಾಯ್ದೆ 1988ರ ಕಲಂ 19(1)(ಬಿ)ರಡಿಯಲ್ಲಿ ಅಪಾದಿತ ನೌಕರರಾದ ಶ್ರೀ ರೇವಣಸಿದ್ದಪ್ಪ ಬಿನ್ ಪಂಪಾಪತೆಪ್ಪ ಕೋಲ್ಕಾರ, ಹಿಂದಿನ ಕೃಷಿ ಅಧಿಕಾರಿ, ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಗಂಗಾವತಿ ಇವರನ್ನು ಅಭಿಯೋಜನೆಗೆ ಒಳಪಡಿಸಲು ಅವಶ್ಯಕ ಎಂದು ಕಂಡು ಬಂದಿದ್ದರಿಂದ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಮಂಜೂರಾತಿ ನೀಡಲು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಕೃಇ 55 ಕೃಪವಿ 2010,**

**ಬೆಂಗಳೂರು ದಿನಾಂಕ: 27ನೇ ಮಾರ್ಚ 2012**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, ಆರೋಪಿತ ಅಧಿಕಾರಿಯವರಾದ ಶ್ರೀ ರೇವಣಸಿದ್ದಪ್ಪ ಬಿನ್ ಪಂಪಾಪತೆಪ್ಪ ಕೋಲ್ಕಾರ, ಹಿಂದಿನ ಕೃಷಿ ಅಧಿಕಾರಿ, ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಗಂಗಾವತಿ ಇವರನ್ನು ಲಂಚ ನಿರೋಧ ಕಾಯ್ದೆ 1988ರ ಕಲಂ 7,13(1)(ಡಿ)

ಜೊತೆಯಲ್ಲಿ ಓದಲಾದ ಕಲಂ 13(2)ರ ಅಡಿಯಲ್ಲಿ ಎಸಗಿದ ಶಿಕ್ಷಾರ್ಹ ಅಪರಾಧಕ್ಕಾಗಿ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಗಗೊಳಿಸಲು ಕಲಂ 19(1)(ಬಿ)ರಡಿಯಲ್ಲಿ ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಮುಂದುವರೆದು ಕರ್ನಾಟಕ ಸರ್ಕಾರದ (ವ್ಯವಹಾರ) ನಿಯಮಾವಳಿ 1977ರ ನಿಯಮ 18ರ ಪ್ರಕಾರ ಸರ್ಕಾರದ ಪರವಾಗಿ ಅಥವಾ ಸರ್ಕಾರದಿಂದ ಹೊರಡಿಸಲಾದ ಆದೇಶಗಳು ಮತ್ತು ಅಧಿಸೂಚನೆಗಳನ್ನು ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಹೊರಡಿಸಬೇಕಾಗುತ್ತದೆ.

ಅದೇ ನಿಯಮಾವಳಿ ನಿಯಮ-19(1)(ಸಿ) ಪ್ರಕಾರ ಕರ್ನಾಟಕ ಸರ್ಕಾರದ ರಾಜ್ಯಪಾಲರ ಹೆಸರಿನಲ್ಲಿ ಹೊರಡಿಸಿರುವ ಆದೇಶಗಳು ಮತ್ತು ಅಧಿಸೂಚನೆಗಳು ಒಬ್ಬ ಅಧೀನ ಕಾರ್ಯದರ್ಶಿಯವರ ಸಹಿಯಿಂದ ಅಧಿಕೃತಗೊಳ್ಳಬೇಕು. ಹಾಗೂ ಅಂತಹ ಸಹಿಯು, ಅಂತಹ ಆದೇಶ ಅಥವಾ ಲೇಖನವನ್ನು ಸರಿಯಾಗಿ ಅಧಿಕೃತಗೊಳ್ಳುತ್ತದೆ.

ಆದ್ದರಿಂದ ಕರ್ನಾಟಕ ಸರ್ಕಾರದ (ವ್ಯವಹಾರ) ನಿಯಮಾವಳಿ 1977ರ ಪ್ರಕಾರ ಈ ಮೇಲ್ಕಂಡ ಆದೇಶವನ್ನು ಸರ್ಕಾರದ ಪರವಾಗಿ ಕಛೇರಿಯ ಮೊಹರು ಮತ್ತು ಸರ್ಕಾರದ ಅಧೀನ ಕಾರ್ಯದರ್ಶಿಯವರ ಸಹಿಯ ಅಡಿಯಲ್ಲಿ ದಿನಾಂಕ: 27ನೇ ಮಾರ್ಚ 2012ರಂದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

( ಕಚೇರಿ ಮುದ್ರೆ)

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

ಇವರಿಗೆ:-

1) ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಲೆಕ್ಕ ತಪಾಸಣೆ) ಕರ್ನಾಟಕ, ಬೆಂಗಳೂರು.
2) ಅಪರ ಪೋಲಿಸ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬಹುಮಹಡಿ ಕಟ್ಟಡ, ಬೆಂಗಳೂರು.
3) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4) ಪೋಲಿಸ ಇನ್ಸಪೆಕ್ಟರ್, ಕರ್ನಾಟಕ ಲೋಕಾಯುಕ್ತ ಕೊಪ್ಪಳ.
5) ಆಯುಕ್ತರು ಕೃಷಿ ಇಲಾಖೆ, ಬೆಂಗಳೂರು.
6) ಆಯುಕ್ತರು ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು.
7) ಜಂಟಿ ಕೃಷಿ ನಿರ್ದೇಶಕರು, ಕೊಪ್ಪಳ.
8) ಸಹಾಯಕ ಕೃಷಿ ನಿರ್ದೇಶಕರು, ಗಂಗಾವತಿ, ಕೊಪ್ಪಳ ಜಿಲ್ಲೆ.
9) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.